RNU AIR DHARWAD

APRIL 28, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಮನ್ ಕಿ ಬಾತ್; ವಿಜ್ಞಾನಿ ಕೆ.ಕಸ್ತೂರಿರಂಗನ್ ಹಾಗೂ ಬಾಗಲಕೋಟೆ ಕೃಷಿಕ, ಶ್ರೀಶೈಲ ತೇಲಿ, ಶ್ಲಾಘಿಸಿದ ಪ್ರಧಾನಮಂತ್ರಿ.
- ಭಯೋತ್ಪಾದನೆ ವಿರುದ್ಧ, ದೇಶದ ಸಮಸ್ತರು, ಒಗ್ಗಟ್ಟು ಪ್ರದರ್ಶಿಸೋಣ – ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಮನವಿ.
- ಯೋಗ ಮತ್ತು ಕ್ರೀಡೆಗೆ, ವಿಶೇಷ ಆದ್ಯತೆ; ರಾಜ್ಯಪಾಲ ಗೆಹ್ಲೋಟ್.
- ಮುದ್ದಂಡ ಕಪ್, ಕೊಡವ ಕೌಟುಂಬಿಕ ಹಾಕಿ; ಮಂಡೇಪಂಡ ಕುಟುಂಬ, ವಿಜಯಿ.
- ಇಂದು, ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯ ಜಾಗ್ರತಿ, ವಿಶ್ವ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ, ಭಾರತ ಮಹತ್ವದ ಮೈಲುಗಲ್ಲು ಸಾಧಿಸುವಲ್ಲಿ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೋ ಮಾಜಿ ಅಧ್ಯಕ್ಷ, ಕೀರ್ತಿಶೇಷ, ಕೃ ಷ್ಣಸ್ವಾಮಿ ಕಸ್ತೂರಿರಂಗನ್ ಅವರ ಕೊಡುಗೆ, ಅಪಾರವಾಗಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ಹೇಳಿದ್ದಾರೆ. ಆಕಾಶವಾಣಿಯ ಜನಪ್ರಿಯ, ಮನ್ ಕಿ ಬಾತ್ ಕಾರ್ಯಕ್ರಮದ, 121ನೇ ಅವೃತ್ತಿಯಲ್ಲಿ, ದೇಶ–ವಿದೇಶಗಳ ಭಾರತೀಯರನ್ನುದ್ದೇಶಿಸಿ, ಅವರು ಮಾತನಾಡಿದರು. ಉಪಗ್ರಹಗಳ ಉಡಾವಣೆ, ನೂತನ ಶಿಕ್ಷಣ ನೀತಿ ಹಾಗೂ ಪಶ್ಚಿಮ ಘಟ್ಟಗಳ ವರದಿಯಿಂದಾಗಿ, ದಾರ್ಶನಿಕ ಕಸ್ತೂರಿರಂಗನ್, ಚಿರಸ್ಥಾಯಿ ಆಗಿದ್ದಾರೆ, ಎಂದರು.

<><><>

1. ಪ್ರಧಾನಮಂತ್ರಿ ಮೋದಿ / ಕಸ್ತೂರಿ ರಂಗನ್/ ಧ್ವನಿ (44)

<><><>

ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ, ನಾಡಿನ ಗಣ್ಯಮಾನ್ಯರು, ವಿಜ್ಞಾನಿಗಳು, ಬೆಂಗಳೂರಿನ ರಾಮನ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿ, ಕಸ್ತೂರಿರಂಗನ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಹೆಬ್ಬಾಳದ ಚಿತಾಗಾರದಲ್ಲಿ, ಸಕಲ ಸರ್ಕಾರಿ ಗೌರವಗಳೊಂದಿಗೆ, ಅಂತ್ಯಕ್ರಿಯೆ ನೆರವೇರಿತು.

<><><>

35 ಡಿಗ್ರಿಗಿಂತ ಅಧಿಕ ತಾಪಮಾನವಿರುವ, ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕಿನ, ಕುಳಲಿ ಗ್ರಾಮದ ಯುವ ಕೃಷಿಕ, ಶ್ರೀಶೈಲ ತೇಲಿ ಅವರ, ಬಯಲುಸೀಮೆಯ, ಸೇಬು ಕೃಷಿ ಯಶೋಗಾಥೆಯ ಬಗ್ಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಮನದ ಮಾತಿನಲ್ಲಿ ವಿಶೇಷವಾಗಿ ಉಲ್ಲೇಖಿಸಿದರು.

<><><>

2. ಪ್ರಧಾನಮಂತ್ರಿ ಮೋದಿ / ಶ್ರೀಶೈಲ್ ತೇಲಿ / ಧ್ವನಿ (35)

<><><>

ಪ್ರಯೋಗಶೀಲ ಕೃಷಿಕ ಶ್ರೀಶೈಲ ತೇಲಿ ಅವರ ಸೇಬು ಕೃಷಿ ಕುರಿತು, ಒಂದು ವರದಿ.

<><><>

*ಹಿಮಾಲಯದ ತಪ್ಪಲಿನ, ಜಮ್ಮು-ಕಾಶ್ಮೀರ, ಉತ್ತರಾಖಂಡ ಹಾಗೂ ಹಿಮಾಚಲ ಪ್ರದೇಶದಲ್ಲಿ ಈ ವರೆಗೆ ಬೆಳೆಸಲಾಗುತ್ತಿದ್ದ, ಸೇಬು ಹಣ್ಣನ್ನು, ರಾಜ್ಯದ ಬಯಲುಸೀಮೆಯ, ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕು, ಕುಳಲಿ ಗ್ರಾಮದಲ್ಲಿ ಪ್ರಪ್ರಥಮ ಬಾರಿಗೆ, ಪ್ರಾಯೋಗಿಕವಾಗಿ ಬೆಳೆದು, ಯಶ ಕಂಡವರು ಪ್ರಯೋಗಶೀಲ ಕೃಷಿಕ ಶ್ರೀಶೈಲ ತೇಲಿ. ಒಟ್ಟು ಮೂರು ಪ್ರಜಾತಿಯ, 2 ಸಾವಿರದ 6 ನೂರು ಸೇಬು ಗಿಡಗಳನ್ನು, 7 ಎಕರೆ ಪ್ರದೇಶದಲ್ಲಿ ಸಾವಯವ ಮಾದರಿಯಲ್ಲಿ ಬೆಳೆಸಿ, ಎರಡು ಪೀಕು ಪಡೆದು, ಸ್ಥಳೀಯ ಮಾರುಕಟ್ಟೆಯಲ್ಲೇ ಮಾರಿ, ಲಾಭ ಪಡೆದಿದ್ದಾರೆ, ಶ್ರೀಶೈಲ ತೇಲಿ. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಅನುಭವ ಹಂಚಿಕೊಂಡಿದ್ದಾರೆ.*

<><><>

3. ವಿವೇಕ (36) + ಸೇಬು ಕೃಷಿಕ ಶ್ರೀಶೈಲ ತೇಲಿ ಧ್ವನಿ (50) ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ಭಯೋತ್ಪಾದನೆ ವಿರುದ್ಧ, ದೇಶದ ಸಮಸ್ತ ಜನತೆ, ಒಗ್ಗಟ್ಟು ದರ್ಶಿಸಬೇಕಿದೆ ಎಂದು, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಅಭಿಪ್ರಾಯಪಟ್ಟಿದ್ದಾರೆ. ಮಂಗಳೂರಿನಲ್ಲಿ ಮಾತನಾಡಿದ ಅವರು, ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದನಾ ಕೃತ್ಯ ಖಂಡನೀಯ. ದೇಶವನ್ನು ಈ ದಾಳಿ ಮೂಲಕ, ದುರ್ಬಲಗೊಳಿಸುವುದು, ಭಾರತೀಯರ ಒಗ್ಗಟ್ಟನ್ನು ಮುರಿದು, ಸಂಚು ರೂಪಿಸುವುದೇ ಆಗಿದೆ. ಈ ಸಂಚಿಗೆ ಬಲಿಬೀಳದೇ, ಒಗ್ಗಟ್ಟಿನಿಂದ ಎದುರಿಸಲು, ಸನ್ನದ್ಧರಾಗಬೇಕು ಎಂದರು.

<><><>

ಯುದ್ಧವನ್ನು ಅಂತಿಮ ಹಾಗೂ ಅನಿವಾರ್ಯ ಆಯ್ಕೆಯಾಗಿ, ಮಾತ್ರ ಮಾಡಬೇಕು. ಯುದ್ಧದಿಂದ ಯಾವುದಕ್ಕೂ ಪರಿಹಾರ ಸಾಧ್ಯವಿಲ್ಲ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರಿನಲ್ಲಿ ಪುನರುಚ್ಚರಿಸಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಯುದ್ಧ ಬೇಡ ಎಂಬ ತಮ್ಮ ಹೇಳಿಕೆಯಿಂದ, ಪಾಕಿಸ್ಥಾನದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ, ಟೀಕಿಸಿದ್ದಾರೆ.

<><><>

ಯೋಗ ಮತ್ತು ಕ್ರೀಡೆಗೆ, ತಾವು ಪ್ರಾಮುಖ್ಯತೆ ನೀಡುತ್ತಿರುವುದಾಗಿ, ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹೇಳಿದ್ದಾರೆ. ಬೆಂಗಳೂರಿನ ಮಾಣಿಕ್ ಶಾ ಕವಾಯತು ಮೈದಾನದಲ್ಲಿ, ಟಿ.ಸಿ.ಎಸ್. ವರ್ಲ್ಡ್ 10ಕೆ ಮ್ಯಾರಥಾನ್‌ಗೆ, ಚಾಲನೆ ನೀಡಿ, ಮಾತನಾಡಿದರು. ಮ್ಯಾರಾಥಾನ್ ನಂತಹ ಕ್ರೀಡೆಗಳು, ಬೆಂಗಳೂರನ್ನು ಜಾಗತಿಕ ಕ್ರೀಡಾ ತಾಣವಾಗಿಸಲಿವೆ. ಆರೋಗ್ಯಕರ ಜೀವನಶೈಲಿ ರೂಢಿಸಿಕೊಳ್ಳಲು, ಬೆಂಗಳೂರಿಗರನ್ನು ಪ್ರೇರೇಪಿಸಲಿವೆ ಎಂದರು. ಬೆಂಗಳೂರು ಸೇರಿದಂತೆ, ವಿವಿಧ ದೇಶಗಳಿಂದ ಆಗಮಿಸಿದ್ದ, 30 ಸಾವಿರಕ್ಕೂ ಅಧಿಕ ಓಟಗಾರರು ಪಾಲ್ಗೊಂಡಿದ್ದರು.

<><><>

ಕೊಡವ ಕೌಟುಂಬಿಕ ಹಾಕಿ, ಮುದ್ದಂಡ ಕಪ್, ಅಂತಿಮ ಪಂದ್ಯಾವಳಿಯಲ್ಲಿ, ಮಂಡೇಪಂಡ ಕುಟುಂಬ, ಜಯಶಾಲಿಯಾಯಿತು. ಮಡಿಕೇರಿಯ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ, 25ನೇ ವರ್ಷದ ಕೊಡವ ಕುಟುಂಬಗಳ ಹಾಕಿ, ಅಂತಿಮ ಪಂದ್ಯದಲ್ಲಿ, ಮಂಡೇಪಂಡ ತಂಡ, ಚೇದಂಡ ತಂಡದ ವಿರುದ್ಧ 1–0ನೇ ಗೋಲಿನಿಂದ ಜಯ ಸಾಧಿಸಿತು. ಮಳೆಯ ಹಿನ್ನೆಲೆ, ನಿರ್ಣಾಯಕರು ಅಂತಿಮ ತೀರ್ಪು ಪ್ರಕಟಿಸಿದರು. 30 ದಿನಗಳ ಕಾಲ ನಡೆದ, ಹಾಕಿ ಪಂದ್ಯಾವಳಿಯಲ್ಲಿ, 396 ಕೊಡವ ಕುಟುಂಬಗಳ ತಂಡಗಳು ಭಾಗವಹಿಸಿದ್ದವು. ಮುದ್ದಂಡ ಕುಟುಂಬದ ಆಥಿತ್ಯದಲ್ಲಿ, ಎರಡು ಕೋಟಿ ರೂಪಾಯಿ ವೆಚ್ಚದಲ್ಲಿ, ಆಯೋಜಿತ ಹಾಕಿ ಪಂದ್ಯದಲ್ಲಿ, ಪ್ರಥಮ ಬಾರಿಗೆ 56 ಮಹಿಳಾ ತಂಡಗಳು ಭಾಗವಹಿಸಿದ್ದು, ವಿಶೇಷ.

<><><>

ಇಂದು, ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯ ಜಾಗ್ರತಿ, ವಿಶ್ವ ದಿನಾಚರಣೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು, ಜಾಗತಿಕ ಅಭಿಯಾನ, ಆಯೋಜಿಸಿದೆ. “ಆರೋಗ್ಯ ಮತ್ತು ಸುರಕ್ಷತೆಯಲ್ಲಿ, ಕ್ರಾಂತಿಕಾರಕ ಬದಲಾವಣೆ: ಕೆಲಸದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲೀಕರಣದ ಪಾತ್ರ” ಎಂಬ, ಧ್ಯೇಯದೊಂದಿಗೆ, ಕೆಲಸದ ಸ್ಥಳಗಳಲ್ಲಿ ಅಪಘಾತಗಳು ಮತ್ತು ರೋಗಗಳ ತಡೆಗಟ್ಟುವಿಕೆಯನ್ನು ಉತ್ತೇಜಿಸಿ, ಆರೋಗ್ಯ ಖಾತ್ರಿ ಪಡಿಸುವ ಗುರಿಯನ್ನು, ಹೊಂದಲಾಗಿದೆ.

<><><>

ಕರ್ನಾಟಕ ಏಕೀಕರಣದ ಕನಸಿನೊಂದಿಗೆ, ತಮ್ಮ ಸರ್ವಸ್ವವನ್ನೂ ಧಾರೆ ಎರೆದು, ಧಾರವಾಡದಲ್ಲಿ, ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದ, ಸಂಸ್ಥಾಪಕ ಕಾರ್ಯದರ್ಶಿ ಹಾಗೂ ಉಪಾಧ್ಯಕ್ಷರಾಗಿ ಗಣನೀಯ ಸೇವೆ ಸಲ್ಲಿಸಿದ, ರಾ.ಹ. ದೇಶಪಾಂಡೆ ಅವರ, 95ನೇ ಪುಣ್ಯ ಸ್ಮರಣೆ ನಿಮಿತ್ತ, ಅವರ ಭಾವಚಿತ್ರಕ್ಕೆ ಗಣ್ಯರು ಗೌರವಾರ್ಪಿಸಿದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಮುಂಬೈಯಲ್ಲಿ, ಮೇ 1 ರಿಂದ 4ರ ವರೆಗೆ, ವೇವ್ಸ್ ಶೃಂಗಸಭೆ ನಡೆಯಲಿದೆ. ಡಿಜಿಟಲ್ ಮಾಧ್ಯಮದ ಸೃಜನಶೀಲರಿಗೆ, ಉತ್ತಮ ವೇದಿಕೆಯಾಗಿದೆ.

<><><>

ಹೊರನಾಡು ಮತ್ತು ಗಡಿನಾಡು ಅಭ್ಯರ್ಥಿಗಳಿಗೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ, ಸಿಇಟಿ, ಕನ್ನಡ ಭಾಷೆ ಪರೀಕ್ಷೆ, ಅಂಕಗಳ ಪಟ್ಟಿಯನ್ನು ತನ್ನ ಜಾಲತಾಣದಲ್ಲಿ ಪ್ರಕಟಿಸಿದೆ. ಕನಿಷ್ಠ 12 ಅಂಕಗಳನ್ನು ನಿಗದಿ ಪಡಿಸಲಾಗಿದೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿಯಲ್ಲಿ ಆಯೋಜಿಸಿದ್ದ, ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶವನ್ನು ಉದ್ಘಾಟಿಸಿ, ಹಲವು ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು.

<><><>

ಯಾದಗಿರಿ ಜಿಲ್ಲೆ ಹುಣಸಗಿ ತಾಲೂಕು, ರಾಜನ ಕೋಳೂರು ಗ್ರಾಮದಲ್ಲಿ, ನರೇಗಾ ಕೂಲಿ ಕಾರ್ಮಿಕರಿಗೆ, ಡಾಕ್ಟರ್ ಎಂ.ಬಿ.ಕೋರಿ, ಆರೋಗ್ಯ ತಪಾಸಿಸಿದರು.

<><><>

ಬೀದರ ಜಿಲ್ಲೆ, ಭಾಲ್ಕಿ ಪಟ್ಟಣದ ಪ್ರಮುಖ ರಸ್ತೆ ಬದಿ ಹಾಗೂ ವಿಭಜಕಗಳಲ್ಲಿ ನೆಡಲಾದ, ಮರಗಳ ಸಚಿವ ಈಶ್ವರ ಖಂಡ್ರೆ ವೀಕ್ಷಿಸಿದರು.

<><><>

ಕೂಡಲಸಂಗಮದಲ್ಲಿ ಆಯೋಜಿತ ಕಾರ್ಯಕ್ರಮದ ಹಿನ್ನೆಲೆ, 'ಅನುಭವ ಮಂಟಪ; ಬಸವಾದಿ ಶರಣರ ರಥ ಯಾತ್ರೆ'ಗೆ, ಬೆಳಗಾವಿ ಹಾಗೂ ಧಾರವಾಡದಲ್ಲಿ, ಅದ್ದೂರಿ ಸ್ವಾಗತ ಕೋರಲಾಯಿತು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮನ್ ಕಿ ಬಾತ್; ವಿಜ್ಞಾನಿ ಕೆ.ಕಸ್ತೂರಿರಂಗನ್ ಹಾಗೂ ಬಾಗಲಕೋಟೆ ಕೃಷಿಕ, ಶ್ರೀಶೈಲ ತೇಲಿ, ಶ್ಲಾಘಿಸಿದ ಪ್ರಧಾನಮಂತ್ರಿ.
- ಭಯೋತ್ಪಾದನೆ ವಿರುದ್ಧ, ದೇಶದ ಸಮಸ್ತರು, ಒಗ್ಗಟ್ಟು ಪ್ರದರ್ಶಿಸೋಣ – ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಮನವಿ.
- ಯೋಗ ಮತ್ತು ಕ್ರೀಡೆಗೆ, ವಿಶೇಷ ಆದ್ಯತೆ; ರಾಜ್ಯಪಾಲ ಗೆಹ್ಲೋಟ್.
- ಮುದ್ದಂಡ ಕಪ್, ಕೊಡವ ಕೌಟುಂಬಿಕ ಹಾಕಿ; ಮಂಡೇಪಂಡ ಕುಟುಂಬ, ವಿಜಯಿ.
- ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯ ಜಾಗ್ರತಿ, ವಿಶ್ವ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>